# ಆರೋಗ್ಯ ಸೌಧದ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿದ ಸಚಿವ ನಾಗೇಂದ್ರ,ಶಾಸಕ ಭರತ್‌ರೆಡ್ಡಿ



ಬಳ್ಳಾರಿ,ಮಾ–: ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು, ಇಂದು ಜಿಲ್ಲಾ ಖನಿಜ ಪ್ರತಿಷ್ಠಾನದ 2020–21 ನೇ ಸಾಲಿನ 6 ಕ್ರಿಯಾ ಯೋಜನೆಯಡಿ ನಿರ್ಮಿಸಲಾಗುವ ಜಿಲ್ಲಾ ಆರೋ ಗ್ಯ ಮತ್ತು ಕುಟುಂಬ ಕಲ್ಯಾಣಾ ಧಿಕಾರಿಗಳ ಕಾರ್ಯಾಲ ಯದ (ಆರೋಗ್ಯ ಸೌಧ) ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೇರವೆರಿಸಿದರು.ಈ ವೇಳೆ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಮಹಾನಗರ ಪಾಲಿಕೆ ಮೇಯರ್ ಬಿ.ಶ್ವೇತ, ಉಪಮೇಯರ್ ಬಿ.ಜಾನಕಿ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಲೋಕೋಪಯೋಗಿ ಇಲಾಖೆಯ ಕಾರ್ಯ ನಿರ್ವಾಹಕ ಅಭಿಯಂ ತರರಾದ ಹೇಮರಾಜ್ ಸೇರಿದಂತೆ ಪಾಲಿಕೆಯ ಸದಸ್ಯರು, ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿ ತರಿದ್ದರು.

# ನೆಹರು ಯುವ ಕೇಂದ್ರ ಮಹಿಳೆಯರ ಸಬಲೀಕರಣವನ್ನು ಆಚರಿಸಲು "ನಾರಿ ಶಕ್ತಿ – ಫಿಟ್‌ನೆಸ್ ರನ್ಸ್"




ಬಳ್ಳಾರಿ ಮಾ –: ಅಂತರರಾಷ್ಟ್ರೀಯ ಮಹಿಳಾ ದಿನಚರಣೆಯ ಅಂಗವಾಗಿ ನೆಹರು ಯುವ ಕೇಂದ್ರವು ಮಹಿಳೆಯರ ಸಬಲೀಕರಣವನ್ನು ಆಚರಿಸಲು ಮತ್ತು ಎಲ್ಲಾ ವಯಸ್ಸಿನ ಮಹಿಳೆಯರಲ್ಲಿ ಫಿಟ್‌ನೆಸ್ ಅನ್ನು ಉತ್ತೇಜಿಸಲು "ನಾರಿ ಶಕ್ತಿ – ಫಿಟ್‌ನೆಸ್ ರನ್ಸ್" ಎನ್ನುವ ಕಾರ್ಯಕ್ರಮವನ್ನು ಇಂದು (11/03/2024) ಬೆಳಿಗ್ಗೆ ಬಳ್ಳಾರಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ & ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಹಮ್ಮಿಕೊಳ್ಳಾಲಾಗಿತ್ತು. ಸುಮಾರು 35 ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು, ಪ್ರಥಮ ಸ್ಥಾನ–ಸ್ವಾತಿ (5ನೇ ಸೆಮಿಸ್ಟರ್–ಸಿಎಸ್‌ಇ), ದ್ವಿತೀಯ ಸ್ಥಾನ–ಎಂ ಪ್ರಗತಿ (1ನೇ ಸೆಮಿಸ್ಟರ್–ಎಂಬಿಎ) ಮತ್ತು ಮೂರನೇ ಸ್ಥಾನ– ಸವಿತ (2ನೇ ಸೆಮಿಸ್ಟರ್–ಎಐಎಂಎಲ್) ಪಡೆದರು.

ಓಟ, ಯೋಗ, ಏರೋಬಿಕ್ಸ್ ಮತ್ತು ಹೆಚ್ಚಿನವುಗಳನ್ನು ಒಳಗೊಂಡಂತೆ ಫಿಟ್‌ನೆಸ್ ಚಟುವಟಿಕೆಗಳ ಶ್ರೇಣಿಯಲ್ಲಿ ತೊಡಗಿಸಿಕೊಳ್ಳಲು ಹಾಗೂ ಮಹಿಳೆಯರಲ್ಲಿ ಸಮುದಾಯ ಮತ್ತು ಸೌಹಾರ್ದತೆಯ ಪ್ರಜ್ಞೆಯನ್ನು ಬೆಳೆಸುವ ಗುರಿಯನ್ನು ಹೊಂದಿದ್ದು, ಅವರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಆದ್ಯತೆ ನೀಡಲು ಈ ಕಾರ್ಯಕ್ರಮವು ಪ್ರೋತ್ಸಾಹಿಸುತ್ತದೆ" ಎಂದು ಕಾಲೇಜಿನ ಪ್ರಾಚಾರ್ಯರಾದ ಡಾ. ಯಡವಳ್ಳಿ ಬಸವರಾಜ್ ರವರು ಬಹುಮಾನಗಳನ್ನು ವಿತರಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ತಿಳಿಸಿದರು.ಕಾಲೇಜಿನ ಎಲ್ಲಾ ಮಹಿಳಾ ಶಿಕ್ಷಕ–ಶಿಕ್ಷಕೇತರ ವೃಂದದವರು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿದರು. ಇದೇ ಸಂದರ್ಭದಲ್ಲಿ ಪಿ.ಹೆಚ್.ಡಿ. ಪದವಿ ಪಡೆದವರಾದ ಡಾ.ಹೇಮವತಿ, ಡಾ.ಶೀತಲ್ ಜಂತಕಲ್ ಅವರನ್ನು ಸನ್ಮಾನಿಸಲಾಯಿತು.

ಬಿಐಟಿಎಂ ವುಮನ್ ವಿಂಗ್ ಅಧ್ಯಕ್ಷರಾದ ಡಾ. ರಾಜಶ್ರೀ ಬಿರಾದಾರ, ಡಾ.ಆರಾಧನ ಡಿ, ಮಹೇಶ್ವರಿ ವಿ.ಜೆ. ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಮೊಂಟು ಪಟಾರ್, ಅಮರೇಶ್, ಶಿಕ್ಷಕ ವೃಂದದವರಾದ ಅಮೃತ, ಚೈತ್ರ, ದೈಹಿಕ ಶಿಕ್ಷಕರಾದ ಅಶೋಕ್ ಉಪಸ್ಥಿತರಿದ್ದರು.

# ಆರ್‌ವೈಎಂಇಸಿಯ ಅಧ್ಯಾಪಕ ಸದಸ್ಯರಿಗೆ ಪಿಎಚ್‌ಡಿ ಪದವಿಗಳ ಪ್ರಶಸ್ತಿ–ಅಭಿನಂದನೆ ಸಲ್ಲಿಸಿದ ಮ್ಯಾನೇಜ್‌ಮೆಂಟ್



ಬಳ್ಳಾರಿ ಮಾ –: ಬಳ್ಳಾರಿ ನಗರದ ಪ್ರತಿಷ್ಠಿತ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕರಿಗೆ ಪಿಎಚ್‌ಡಿ ಪದವಿಯನ್ನು ನೀಡಲಾಗಿದೆ.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ವಿಭಾಗ

1)ಡಾ.ಲಿಂಗರಾಜ್ ಕೆ. ಪಿಎಚ್‌ಡಿ ಮಾರ್ಗದರ್ಶಿ: ಡಾ ರಾಜಶ್ರೀ ವಿ ಬಿರಾದಾರ, ಬಿಐಟಿಎಂ, ಬಳ್ಳಾರಿ.
ವಿಶ್ವವಿದ್ಯಾಲಯ : ವಿಶ್ವೇಶ್ವರಯ್ಯ. ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿ.ವಿಷಯ : "ಫಝ್ಜಿ ಲಾಜಿಕ್ ಬೇಸ್ಡ್ ಪಾರ್ಟಿಕಲ್ ಸ್ವಾರ್ಮ ಆಪ್ಟಿಮೈಜೇಷನ್ ಇಟಿನರೀ ಪ್ಲಾನಿಂಗ್ ಇನ್ ವಯರ್‌ಲೆಸ್ ಸೆನ್ಸಾರ್ ನೆಟ್‌ವರ್ಕ ಅಂಡ್ ಇಟ್ಸ್ ನಾವೆಲ್ ಎಪ್ರೋಚ್ ಇನ್ ಮಾನಿಟರಿಂಗ್ ಸಿಸ್ಟಮ್ಸ್ "
.2)ಡಾ ಚೌಪಿರಿ ಶಿವಕೇಶಿ,ಪಿಎಚ್‌ಡಿ ಮಾರ್ಗದರ್ಶಿ: ಡಾ ಶ್ರೀಪತಿ ಬಿ, ಆರ್‌ವೈಎಂ ಎಂಜಿನಿಯರಿಂಗ್ ಕಾಲೇಜು, ಬಳ್ಳಾರಿವಿಶ್ವವಿದ್ಯಾಲಯ : ವಿಶ್ವೇಶ್ವರಯ್ಯ. ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿ.ವಿಷಯ : "ಆಪ್ಟಿಮೈ ಜೇಷನ್ ಆಫ್ ಎನರ್ಜಿ ಕನ್ಜಪ್ಶನ್ ಇನ್ ಸಾಫ್ಟ್ ವೇರ್ ಡಿಫೈನ್ಡ್ ನೆಟ್ ವರ್ಕಿಂಗ್ ಯೂಜಿಂಗ್ ಎನರ್ಜಿ ಅವೇರ್ ರೂಟಿಂಗ್ "ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ.
3)ಡಾ ಪಿ ಕೇಸರಿ ಪವನ್ ಕುಮಾರ್, ಪಿಎಚ್‌ಡಿ ಮಾರ್ಗದರ್ಶಿ: ಡಾ ಹಿರೇಗೌಡರ್ ಯರ್ರನ್ ಗೌಡರ್,ಆರ್‌ವೈಎಂ ಎಂಜಿನಿಯರಿಂಗ್ ಕಾಲೇಜು, ಬಳ್ಳಾರಿ. ವಿಶ್ವವಿ ದ್ಯಾಲಯ: ಜವಾಹರಲಾಲ್ ನೆಹರು ತಾಂತ್ರಿಕ ವಿಶ್ವವಿದ್ಯಾಲಯ (ಜೆಎನ್‌ಟಿಯು), ಹೈದರಾಬಾದ್.ವಿಷಯ : "ಟೂ ಸ್ಟ್ರೋಕ್ ಸ್ಪಾರ್ಕ್ ಇಗ್ನಿಷನ್ ಎಂಜಿನ್ ಕಾರ್ಯಕ್ಷಮತೆಯನ್ನು ಸುಧಾರಿಸಲು ಮತ್ತು ಹೊರಸೂಸುವಿಕೆಯನ್ನು ಕಡಿಮೆ ಮಾಡಲು ತನಿಖೆ"ಮ್ಯಾನೆಜ್‌ಮೆಂಟ್ ಅಧ್ಯಯನ ವಿಭಾಗ.
4)ಡಾ ವಿನಯ್ ಗಾಡಿಗಿ,ಪಿಎಚ್‌ಡಿ ಮಾರ್ಗದರ್ಶಿ: ಡಾ ಹಾವಿನಾಳ್ ವೀರಭದ್ರಪ್ಪ ಆರ್‌ವೈಎಂ ಇಂಜಿನಿಯರಿಂಗ್ ಕಾಲೇಜು, ಬಳ್ಳಾರಿವಿಶ್ವವಿದ್ಯಾಲಯ : ವಿಶ್ವೇಶ್ವರಯ್ಯ.ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿ.ವಿಷಯ : ""ಏ ಮಾಡ್ರನ್ ಅಪ್ರೋಚ್ ಟು ಎವಾಲ್ಯೂಯೆಟ್ ಎಂಪ್ಲಾಯೀ ಪರೊಡಕ್ಟಿವಿಟಿ ಬೇಸ್ಡ್ ಆನ್ ಮೂಡ್ ವೇರಿಯೇಶನ್ ಎಂಪ್ಲಾಯಿಂಗ್ ಕಂಪ್ಯೂಟರ್ ವಿಝನ್ ಟೆಕ್ನಿಕ್ ▯ ಏ ಕೇಸ್ ಸ್ಟಡೀ ಆಫ್ ಝಡ್–ಸ್ಕೇಲಾರ್ ಕಂಪನಿ "ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗ
'5)ಡಾ ಮಾನಸ ಕೆ ಚಿಗಟೇರಿ, ಪಿಎಚ್‌ಡಿ ಮಾರ್ಗದರ್ಶಿ: ಡಾ. ಸವಿತಾ ಸೋನೋಳಿ, ಆರ್‌ವೈಎಂಇಸಿ, ಬಳ್ಳಾರಿವಿಶ್ವವಿದ್ಯಾಲಯ : ವಿಶ್ವೇಶ್ವರಯ್ಯ.ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿ. ವಿಷಯ : "ಇಂಟಿಗ್ರೇಟೆಡ್ ಅನಲೀಸಿಸ್ ಆಫ್ ಹೆಚ್.ಎಸ್.ವಿ ಹಿಸ್ಟೋಗ್ರಾಮ್ ಕ್ಯಾರಕ್ಟರ್ಸ್ಟಿಕ್ಸ್ ವಿತ್ ಶೇಪ್ ಬೆಸಡ್ ಎಡ್ಜ್ ಡಿಟೆಕ್ಷನ್ ಟು ಇಂಪ್ರೂ ದ ರಿಟ್ರೀವಲ್ ಸಿಸ್ಟಮ್ ಪರ್ಫಾರ್ಮೆನ್ಸ್ ಇನ್ ಸಿಬಿಐಆರ್"ಅವರ ಸಾಧನೆಗೆ ಸ್ಫೂರ್ತಿ ನೀಡಿದ ವಿಭಾಗದ ಮುಖ್ಯಸ್ಥರು ಹಾಗೂ ವಿಭಾಗದ ಪ್ರಧ್ಯಾಪಕರು, ಸಿಬ್ಬಂಧಿವರ್ಗದವರು, ಪ್ರಾಂಶುಪಾಲರು ಡಾ|| ಟಿ. ಹನುಮಂತರೆಡ್ಡಿ, ಉಪಪ್ರಾಂಶುಪಾಲರು ಡಾ|| ಸವಿತಾ ಸೋನೊಳಿ, ವಿ.ವೀ.ಸಂಘದ ಅಧ್ಯಕ್ಷರಾದ ಆರ್.ರಾಮನಗೌಡರು, ವೀ.ವಿ.ಸಂಘದ ಉಪಾಧ್ಯಕ್ಷರು ಹಾಗೂ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಅಲ್ಲಂ ಚನ್ನಪ್ಪ, ಕಾರ್ಯದರ್ಶಿಗಳಾದ ಶ್ರೀ ಗುರುಸಿದ್ದಸ್ವಾಮಿ, ಸಹ ಕಾರ್ಯದರ್ಶಿಗಳಾದ ಶ್ರೀ ದರೂರು ಶಾಂತವೀರನ ಗೌಡ, ಖಜಾಂಚಿಗಳಾದ ಶ್ರೀ ಗೋನಾಳ್ ರಾಜಶೇಖರ್ ಗೌಡ, ಆರ್.ವೈ.ಎಮ್,ಇ,ಸಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಜಿ.ಎಂ ಮಲ್ಲಿಕಾರ್ಜುನ ರೆಡ್ಡಿ, ಶ್ರೀ ಬಸವರಾಜ ರೂಪನಗುಡಿ, ಶ್ರೀ ಜಾನೆಕುಂಟೆ ಪಂಪನ ಗೌಡ, ಶ್ರೀ ಕೊರ್ಲಗುಂದಿ ಬಸವನ ಗೌಡ, ಶ್ರೀ ಹಲಕುಂದಿ ಸತೀಶ್ ಕುಮಾರ್, ಅಭಿನಂದಿಸಿದರು.

ಮುಂದೆ ಆರ್.ವೈ.ಎಮ್.ಇ.ಸಿ ಕಾಲೇಜಿಯಲ್ಲಿ ಇತರರು ಹೆಚ್ಚಿನ ಪಿ.ಹೆಚ್.ಡಿ ಪದವಿಗಳು ಸಾಧಿಸಲು ಶುಭಹಾರೈಸಿದರು ಹಾಗೂ ಬಳ್ಳಾರಿಯ ಆರ್‌ವೈಎಂಇಸಿಯ ವಿದ್ಯಾರ್ಥಿಗಳು, ಕುಟುಂಬಸ್ಥರು ಹಾಗೂ ಸ್ನೇಹಿತರು ಡಾಕ್ಟರೇಟ್ ಪದವಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ಯರಗಟ್ಟಿ: ಸಮೀಪದ ರೈನಾಪೂರ ಗ್ರಾಮದಲ್ಲಿ ಸೋಮವಾರ ಸಡಗರ ಸಂಭ್ರಮದಿಂದ ದುರ್ಗಾದೇವಿ ಜಾತ್ರೆ ಜರುಗಿತು.
ಜಾತ್ರೆ ಪ್ರಯುಕ್ತ ವಿವಿಧ ಧಾರ್ಮಿಕ ವಿಧಿ–ವಿಧಾನಗಳು ಜರುಗಿದವು. ನಂತರ ಡೊಳ್ಳಿನ ವಾದ್ಯದ ಮೂಲಕ ಭಂಡಾರ ಉತ್ಸವ ಸೇರಿದಂತೆ ವಿವಿಧ ಗ್ರಾಮಗಳ ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುಂಭ, ಕಳಸ, ವಾದ್ಯಗಳೊಂದಿಗೆ ನೂರಾರು ಜನರು ಭಾಗವಹಿಸಿದ್ದರು. ಬೆಳಗ್ಗೆ ದುರ್ಗಾದೇವಿ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಬಳಿಕ ವಿವಿಧ ಕಲಾವಿದರಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಂತರ ಪಲ್ಲಕಿ ಉತ್ಸವಜ ಮೆರವಣಿಗೆ ನಡೆಯಿತು. ಜಾತ್ರೆ ಅಂಗವಾಗಿ ಅನ್ನಸಂತರ್ಪಣೆ ನಡೆಯಿತು.

# ಬಿಜೆಪಿ ಜಿಲ್ಲಾ ಯುವಮೋರ್ಚ ಅಧ್ಯಕ್ಷ ಸಿದ್ದಪ್ಪನವರ ಆದೇಶ ಪತ್ರ ವಿತರಣೆ



ಬಳ್ಳಾರಿ ಮಾ–: ಭಾರತೀಯ ಜನತಾ ಪಾರ್ಟಿ ಬಳ್ಳಾರಿ ಜಿಲ್ಲಾ ಕಛೇರಿಯಲ್ಲಿ ದಿನಾಂಕ: 11–03–2023 ರಂದು ಅನಿಲ್ ಕುಮಾರ್ ಮೋಕಾ ಬಿಜೆಪಿ ಜಿಲ್ಲಾಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಮತ್ತು ವಿಧಾನ ಪರಿಷತ್ ಸದಸ್ಯರು ಹಾಗೂ ಬಳ್ಳಾರಿ ಲೋಕಸಭಾ ಚುನಾವಣೆ ಸಂಚಾಲಕರಾದ ವೈ ಎಂ ಸತೀಶ್,ಡಾ|| ಬಿ.ಕೆ.ಸುಂದರ್ ಜಿಲ್ಲಾ ವಕ್ತಾರರ ಉಪಸ್ಥಿತಿಯಲ್ಲಿ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಎಂ.ಎಸ್.ಸಿದ್ದಪ್ಪನವರ ಆದೇಶ ಪತ್ರವನ್ನು ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಸೋಮನಗೌಡ, ಉಡೇದ್ ಸುರೇಶ್ ಹಾಗೂ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕೈ ಚಾಚಿ ಕರೆಯುತ್ತಿದೆ ಬೇಸಿಗೆಯನ್ನು ನೀಗಿಸಿ ಮೈ ಮರೆಸುವ ಗಂಧರ್ವಗಿರಿ ಅಡ್ವೆಂಚರ್ಸ್ & ನೇಚರ್ ರೀಟ್ರೀಟ್



ಬಳ್ಳಾರಿ ಮಾ –: ಬಳ್ಳಾರಿಯಿಂದ ಕೇವಲ 15 ಕಿ.ಮೀ ದೂರದ ಡಿ. ಹಿರೇಹಾಳ್‌ನ ಬಸಾಪುರದ ರಸ್ತೆಯಲ್ಲಿ ಗಂಧರ್ವಗಿರಿ ರೆಸಾರ್ಟ್ ಅನ್ನು ಅದ್ದೂರಿಯಾಗಿ ಪ್ರಾರಂಭಿಸಿದ್ದಾರೆ ಬಳ್ಳಾರಿಯ ಪ್ರಖ್ಯಾತ ವೈದ್ಯರಾದ ಅಮರೇಗೌಡ್ರು..

ಬೇಸಿಗೆ ಕಾಲದಲ್ಲಿ ಮೈಮರೆಸುವಂತಹಾ ವಾತಾವರಣವನ್ನು ಅಲ್ಲಿ ಸೃಷ್ಠಿ ಮಾಡಿದ್ದಾರೆ ಗೌಡ್ರು. ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯ ತನಕ ನಮ್ಮನ್ನು ನಾವೇ ಮರೆತು ಬಿಡುವಂತಹಾ, ಒಮ್ಮೆ ಹೋದರೇ ಮತ್ತೇ ಮತ್ತೇ ಹೋಗಬೇಕೆನ್ನುವ, ಒಂದು ದಿನ ಪೂರ್ತಿಯಾಗಿ ಕಳೆಯುವಂತ ಸಾಹಸ ಆಟಗಳ ತಾಣ ಅಲ್ಲಿ ನಿರ್ಮಾಣ ಮಾಡಿದ್ದಾರೆ. ಒಳಗಡೆ ಹೋದಮೇಲೆ ಹೊರಗಡೆಯ ಪ್ರಪಂಚವನ್ನು ಮರೆತೇ ಬಿಡುತ್ತೇವೆ ಎನ್ನುವಂತಹಾ ಕ್ರೀಡೆಗಳು, ವಿನೂತನವಾದ 12 ಡಿ ಮೂವಿ ಥಿಯೇಟರ್, ಮಿರ್ರರ್‌ಮೇಜ್ (ಫಜಲ್ ಗೇಮ್), ಹಾರ್ರರ್ ಹೌಸ್,ಮೋಟರ್ ಬೋಟಿಂಗ್, ಮಸಾಜ್ ಚೇರ್, ಈಜು ಕೋಳ, ಬಿಲ್ಲು ವಿದ್ಯೆ,ಗನ್ ಶೋಟ್, ಕುದುರೆಯ ಸವಾರಿ, ವಾಟರ್ ರೋಲರ್ ಬಾಲ್,ವಾಟರ್ ಜೋರ್ಬಿಂಗ್, ಜೀಪ್ ಡ್ರೈವಿಂಗ್,ರೆಯಿನ್ ಡ್ಯಾನ್ಸ್, ಮಕ್ಕಳ ಕ್ರೀಡಾ ಮೈದಾನ, ಯಾಂಪಿ ಥಿಯೇಟರ್, ಬೊಟಾನಿಕಲ್ ಗಾರ್ಡೆನ್,ಜಾದು, ಎಟಿವಿ ಕ್ವಾಡ್ ಬೈಕ್, ಸ್ಪೋರ್ಟ್ಸ್ ಕ್ಲೈಂಬಿಂಗ್, ಜಿಪ್ ಲೈನ್, ಸ್ಕೈ ಬೈಕ್ಸ್, ಬುಲ್ ರೋಡಿಯೋ,ಬುಂಜಿ ಟ್ರಾಂಪೋ ಲೈನ್, ಲ್ಯಾಂಡ್ ಜೋರ್ಬಿಂಗ್, ಬಾಡಿ ಜೋರ್ಬಿಂಗ್, ಪೇಂಟ್ ಬಾಲ್, ಎಲೆಕ್ಟ್ರಾನಿಕ್ ಗೇಮ್ಸ್, ದೋಣಿ ವಿಹಾರ,ಕ್ರಿಕೆಟ್,ಸಾಂಡ್ ವಾಲಿ ಬಾಲ್,ಶಟಲ್ ಬ್ಯಾಡ್ಮಿಂಟನ್, ಫ್ರಿಸ್ಬಿ ಮತ್ತು ಒಳಾಂಗಣ ಕ್ರೀಡೆಗಳಾದ ಕ್ಯಾರಮ್ಸ್,ಚೆಸ್,ಬೋರ್ಡ್ ಗೇಮ್ಸ್, ಟೇಬಲ್ ಟೆನ್ನೀಸ್ ಮೊದಲಾದ ಕ್ರೀಡೆಗಳನ್ನು ನಾವು ಅಲ್ಲಿ ಆಡಬಹುದಾಗಿದೆ. ಇಷ್ಟೆಲ್ಲಾ ಆಡಿದ ಮೇಲೇ ಮಕ್ಕಳು ಮನೆಗೆ ಹೋಗೋಣ್ವಾ ಅಂದ್ರೆ ಬೇಡಾ ಇಲ್ಲೇ ಇರೋಣಾ ಅಂದು ಬಿಡ್ತಾರೆ ಯಾಕಂದರೇ ಅಲ್ಲಿಯ ಹಚ್ಚ ಹಸಿರಿನ ಗಿಡ,ಮರಗಳ ವಾತಾವರಣ ಮಕ್ಕಳನ್ನು ಮೈ ಮರೆತು ಬಿಡುವಂತೆ ಮಾಡಿ ಬಿಡುತ್ತದೆ. ಮಕ್ಕಳು ಮಾತ್ರ ಅಂದರೇ ತಪ್ಪಾಗುತ್ತದೆ ಮಹಿಳೆಯರು, ಯುವತಿಯರು,ಪುರುಷರು ಕೊನೆಗು ವೃದ್ದರ ಮನಸ್ಸು ಕೂಡಾ ಕದ್ದುಬಿಡುತ್ತೆ ಅಲ್ಲಿಯ ನೈಸರ್ಗಿಕ ವಾತಾವರಣದ ತಾಣ..!!! ಅಲ್ಲಿರುವ ಸೌಲಭ್ಯಗಳು ಮತ್ತೆಲ್ಲೂ ಕಂಡಿಲ್ಲ ಅಂತಾರೇ ಬಂದಿರುವ ಪ್ರವಾಸಿಗರು. ಗಂಧರ್ವಗಿರಿಯ ರೆಸಾರ್ಟ್‌ನಲ್ಲಿ ಪಾದಾರ್ಪಣೆ ಮಾಡಿದ ತಕ್ಷಣವೇ ಜ್ಯೂಸ್ ಕೊಡ್ತಾರೆ, ಮದ್ಯಾಹ್ನ ಮನೆಯ ಊಟದಂತೆ ಬಗೆ ಬಗೆಯ ಹೊಟ್ಟೆ ತುಂಬ ಊಟ ಕೊಡ್ತಾರೆ, ಸಾಯಂಕಾಲ ಬಿಸಿ ಬಿಸಿ ಬಜ್ಜಿ,ಮಂಡಕ್ಕಿ, ಟೀ,ಕಾಫಿ ಮುಂತಾದವು ಕುಡಾ ಕೊಡ್ತಾರೆ, ಅಲ್ಲಿರುವ ಸಿಬ್ಬಂದಿ ನಗು ನಗುತಾ ಮಾತಾಡ್ಸಿ, ಎಲ್ಲಾ ಕ್ರೀಡೆಗಳು ಆಡಲು ಪ್ರೋತ್ಸಾಹಿಸ್ತಾರೆ, ಇನ್ನೇನ್ಬೇಕ್ರೀ ನಮ್ಗೆ ತಕ್ಷಣ ಹೊರ 'ಡೋಣ್ವಾ ನಡ್ರೀ ಗಂಧರ್ವಗಿರಿ ರೆಸಾರ್ಟ್‌ಗೆ. ಇನ್ನೂ ಹೆಚ್ಚಿನ ಮಾಹಿ ತಿಗಾಗಿ 7771938888,6361500008 ಸಂಪರ್ಕಿಸಲು ಕೊರಿದೆ.

# ಮಹಿಳಾ ಯೋಗಕ್ಷೇಮಕ್ಕಾಗಿ 'ಹರ್ ಹೆಲ್ತ್ ಫಸ್ಟ್' ಅಭಿಯಾನ– ರಜನೀಶ್ ಚೋಪ್ರಾ




ಬಳ್ಳಾರಿ ಮಾ –: ಪ್ರಮುಖ ಆರೋಗ್ಯ ಮತ್ತು ಯೋಗಕ್ಷೇಮದ ಕಂಪನಿಗಳಲ್ಲಿ ಒಂದಾದ ಆಮ್ವೇ ಇಂಡಿಯಾ, ಹರ್ ಹೆಲ್ತ್ ಫಸ್ಟ್ ಅಭಿಯಾನದ ಮೂಲಕ ಮಹಿಳೆಯರ ಆರೋಗ್ಯಕ್ಕೆ ಆದ್ಯತೆ ನೀಡುವ ಅಚಲ ಬದ್ಧತೆಯೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ವಿಶಿಷ್ಟವಾಗಿ ಆಚರಿಸಿದೆ. ಈ ಉಪಕ್ರಮವು ಮಹಿಳೆಯರ ಆರೋಗ್ಯದ ಕುರಿತು ನಿರ್ಣಾಯಕ ವಿಷಯಗಳ ಬಗ್ಗೆ ಪ್ರೇರೇಪಿಸುವ ಮತ್ತು ವರ್ಧಿಸುವ ಗುರಿಯನ್ನು ಹೊಂದಿದೆ. ಈ ಉಪಕ್ರಮವು ಮಹಿಳೆಯರ ಆರೋಗ್ಯದ ಕುರಿತು ನಿರ್ಣಾಯಕ ವಿಷಯಗಳನ್ನು ಪ್ರೇರೇಪಿಸುವ ಮತ್ತು ವರ್ಧಿಸುವ ಗುರಿಯನ್ನು ಹೊಂದಿದೆ ಎಂದು ಆಮ್ವೇ ಇಂಡಿಯಾದ ಮುಖ್ಯಸ್ಥ ರಜನೀಶ್ ಚೋಪ್ರಾ ಪ್ರಕಟಣೆಯಲ್ಲಿ ಹೇಳಿದ್ದಾರೆಕಾರ್ಯಕ್ರಮಗಳ ಸರಣಿಯನ್ನು ಆಯೋಜಿಸುವ ಮೂಲಕ, ಕಂಪನಿಯು ಎಲ್ಲ ಮಹತ್ವಾಕಾಂಕ್ಷೆಯ ಮಹಿಳೆಯರಿಗೆ ತಮ್ಮ ಆರೋಗ್ಯ ಗುರಿಗಳ ಉಸ್ತುವಾರಿ ವಹಿಸಲು ಹಾಗೂ ಅವರ ಕನಸುಗಳನ್ನು ಸಾಧಿಸಲು ತಮ್ಮ ಗಡಿಗಳನ್ನು ಮೀರಿ ಮುಂದುವರಿಯುವ ಪ್ರಬಲ ಸಂದೇಶವನ್ನು ನೀಡಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.ದೇಶದ ದಕ್ಷಿಣ ಭಾಗದಲ್ಲಿ, ಆಮ್ವೇ ಇಂಡಿಯಾವು ಮಹಿಳೆಯರಿಗಾಗಿ ಸಮಗ್ರ ಯೋಗಕ್ಷೇಮದ ಮೇಲೆ ಕೇಂದ್ರೀಕರಿಸಿದ ಆನ್‌ಲೈನ್ ಮತ್ತು ಆನ್‌ಲೈನ್ ಮಧ್ಯಸ್ಥಿಕೆಗಳ ಸರಣಿಯನ್ನು ಆಯೋಜಿಸಿದೆ. ಸೂಪರ್ ಶೀರೋಸ್ ಶೀರ್ಷಿಕೆಯಡಿ ಗುಂಪು ಚರ್ಚೆಯನ್ನು ಹಮ್ಮಿಕೊಳ್ಳಲಾಗಿದೆ. ಅಡೆತಡೆಗಳನ್ನು ಮುರಿದು ಆರೋಗ್ಯ ಮತ್ತು ಯೋಗಕ್ಷೇಮವನ್ನು ಚಾಲನೆ ಮಾಡುವಲ್ಲಿ ಗಮನಾರ್ಹ ಗುರಿಯನ್ನು ಸಾಧಿಸಿದ ಮಹಿಳಾ ಉದ್ಯಮಿಗಳ ಯಶೋಗಾಥೆಗಳನ್ನು ಇದು ಬಿಂಬಿಸಿದೆ. ಎಲ್ಲರಿಗೂ ಆರೋಗ್ಯಕರ ಭವಿಷ್ಯವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ. ಈ ವಾಣಿಜ್ಯೋದ್ಯಮಿಗಳಿಗೆ ಆರೋಗ್ಯ ಮತ್ತು ಯೋಗಕ್ಷೇಮದ ಮಾತುಕತೆಯಲ್ಲಿ ಸಹಾಯ ಮಾಡುವ ಸಲುವಾಗಿ ಪ್ರಮುಖರಾದ ಪೌಷ್ಟಿಕತಜ್ಞರು ಕೂಡಾ ಚರ್ಚೆಯಲ್ಲಿ ಪಾಲ್ಗೊಂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

# ಸುವರ್ಣ ಕರ್ನಾಟಕ ಸಂಭ್ರಮ ರಥಯಾತ್ರೆ ಹೆಸರಿನಲ್ಲಿ ಸರಕಾರದ ಯೋಜನೆಗಳ ಪ್ರಚಾರ




ಯರಗಟ್ಟಿ: ಹೆಸರಿಗಷ್ಟೇ ಸುವರ್ಣ ಕರ್ನಾಟಕ ಸಂಭ್ರಮ ರಥಯಾತ್ರೆ ಒಳಗೆಲ್ಲ ಐದು ಗ್ಯಾರಂಟಿ ಯೋಜನೆಗಳ ಪ್ರಚಾರ ಇದು ಕನ್ನಡ ಅಭಿಮಾನಿಗಳಿಗೆ ತುಂಬಾ ನೋವುಂಟು ಮಾಡುವ ಸಂಗತಿಯಾಗಿದೆ.

ವಿಶಾಲ ಮೈಸೂರು ರಾಜ್ಯವು ಕರ್ನಾಟಕ ರಾಜ್ಯವೆಂದು ನಾಮಕರಣವಾಗಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 'ಹೆಸರಾಯಿತು ಕನ್ನಡ ಉಸಿರಾಗಲಿ ಕನ್ನಡ' ಎಂಬ ವಾಕ್ಯದೊಂದಿಗೆ ಆರಂಭಿಸಿದ ರಥಯಾತ್ರೆಯು ಹೆಸರಿಗಷ್ಟೇ ಕನ್ನಡ ಯಾತ್ರೆಯಾಗಿದೆ. ಕನ್ನಡಕ್ಕೆ ಸಂಬಂಧಪಟ್ಟ ಯಾವುದೇ ಒಂದು ಪದವು ಪ್ರಚಾರದಲ್ಲಿ ಬಳಕೆ ಆಗಿಲ್ಲ. ಬದಲಿಗೆ ಸರಕಾರದ ಗ್ಯಾರಂಟಿ ಯೋಜನೆಗಳ ಪ್ರಚಾರವಾಗಿದೆ. ಕರ್ನಾಟಕದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಕವಿಗಳು ಇದ್ದರೂ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೂಡ ಕಣ್ಣು ಮುಚ್ಚಿಕೊಂಡು ಕನ್ನಡಪರ ಸಂಘಟನೆಗಳು ರಥಯಾತ್ರೆಯಲ್ಲಿ ಭಾಗವಹಿಸುವಂತೆ ಆದೇಶಿಸಿದೆ. ಇದರ ಬಗ್ಗೆ ಕನ್ನಡ ಅಭಿಮಾನಿಗಳಿಗೆ ನೋವುಂಟು ಮಾಡಿದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಇದು ಕನ್ನಡ ರಥಯಾತ್ರೆಯಾಗಿದೆ ಆದರೆ ಇದು ಐದು ಗ್ಯಾರಂಟಿ ಯೋಜನೆಗಳ ರಥಯಾತ್ರೆ ಎಂದು ಪ್ರಚಾರ ಮಾಡಬೇಕಿತ್ತು.

ಹೇಳಿಕೆ : ಕರ್ನಾಟಕ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಕನ್ನಡ ರಥಯಾತ್ರೆಯು ಕನ್ನಡದ ಯಾತ್ರೆಯಲ್ಲ, ಐದು ಗ್ಯಾರಂಟಿ ಯೋಜನೆಗಳ ಯಾತ್ರೆಯಾಗಿದೆ. ಇದು ಸರ್ಕಾರವು ಕನ್ನಡಕ್ಕೆ ಮಾಡಿದ ಅವಮಾನವಾಗಿದೆ. ಹೆಸರಾಯಿತು ಕನ್ನಡ ಉಸಿರಾಗಲಿ ಕನ್ನಡ ಎಂಬ ವಾಕ್ಯದೊಂದಿಗೆ ಪ್ರಾರಂಭಗೊಂಡ ರಥಯಾತ್ರೆಯು ಕನ್ನಡಕ್ಕೆ ಸಂಬಂಧಿತವಲ್ಲ ಎಂದು ಕನ್ನಡ ಅಭಿಮಾನಿಗಳು ಆಕ್ಷೇಪಿಸಿದ್ದಾರೆ.

# ಶ್ರೀ ಗುರು ಅಡವಿಸಿದ್ದೇಸ್ವರ ಮಠದಲ್ಲಿ ಜರುಗಿದ ಶಿವಾನುಭವಗೋಷ್ಠಿಯನ್ನು ಶ್ರೀ ಅಡವಿಸಿದ್ದರಾಮ ಶ್ರೀಗಳು, ಗಜಾನನ ಮನ್ನಿಕೇರಿ ಮತ್ತು ಶ್ರೀ ನಿಶ್ಚಲ ಸ್ವರೂಪ ಸ್ವಾಮೀಜಿ ಉದ್ಘಾಟಿಸಿದರು



ಮೂಡಲಗಿ: ಭೂಮಿ ಮೇಲಿರುವ ಪ್ರತಿ ಯೊಬ್ಬರಿಗೂ ಗುರುವಿನ ಅವಶ್ಯಕತೆ ಇದೆ ಎಂದು ಬೆಳಗಾವಿಯ ಪ್ರಣವಂ ಪೌಂಡೇಶನ ಗುರುಕುಲದ ಶ್ರೀ ನಿಶ್ಚಲ ಸ್ವರೂಪ ಸ್ವಾಮೀಜಿ ಹೇಳಿದರು.

ತಾಲೂಕಿನ ಶಿವಾಪೂರ(ಹ) ಗ್ರಾಮದ ಶ್ರೀ ಗುರು ಅಡವಿಸಿದ್ದೇಸ್ವರ ಮಠದಲ್ಲಿ ಜರುಗಿದ ಶಿವಾನುಭ ವಗೋಷ್ಠಿಯಲ್ಲಿ ಶ್ರೀಮಠದಿಂದ ಸತ್ಕಾರ ಸ್ವೀಕರಿಸಿ ಮಾತನಾಡಿದ ಅವರು, ಮನುಷ್ಯನ ಜೀವನದಲ್ಲಿ ಗುರು ಇರುತ್ತಾನೆಯೊ ಈ ಭೂಮಿಯ ಮೇಲೆ ಅವನಷ್ಟು ದೊಡ್ಡವ ಯಾರು ಇಲ್ಲ, ಭೂಮಿಯ ಮೇಲೆ ಬೆಲೆ ಕಟ್ಟಲಾಗದಂತಹ ವಸ್ತು ಯಾವುದಾದರೂ ಇದೆ ಎಂದರೆ ಅದು ಗುರು ಉಪದೇಶ, ಪ್ರತಿಯೊಬ್ಬರೂ ಆಧುನಿಕತೆಗೆ ಮಾರು ಹೋಗದೆ ಗುರುವಿನ ಸನ್ಮಾರ್ಗ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗಿ ತಮ್ಮ ಜೀವನವನ್ನು ಪಾವನ ಮಾಡಿಕೊಳ್ಳಬೇಕೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಶಿಕ್ಷಣ ಇಲಾಖೆಯ ನಿವೃತ ಸಹ ನಿರ್ದೇಶಕ ಹಾಗೂ ಭಾರತ ಸ್ಕೌಟ್ಸ್ ಗೈಡ್ಸ್ ಉಪಾಧ್ಯಕ್ಷ ಗಜಾನನ ಮನ್ನಿಕೇರಿ ಅವರು ಶ್ರೀಗಳಿಂದ ಆಶೀರ್ವಾದ ಸ್ವೀಕರಿಸಿ ಮಾತನಾಡಿ, ತಾಯಂದಿರರು ತಮ್ಮ ಮಕ್ಕಳಿಗೆ ಸಂಸ್ಕಾರದ ಜೊತೆಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂದರು.

ಸಾನಿದ್ಯ ವಹಿಸಿ ಮಾತನಾಡಿದ ಶ್ರೀ ಮಠದ ಶ್ರೀ ಅಡವಿಸಿದ್ದರಾಮ ಶ್ರೀಗಳು ಮಾತನಾಡಿ, ಗ್ರಾಮದ ಎಲ್ಲರಲ್ಲಿಯು ಅನಾಚಾರ ದೂರವಾಗಿ, ಜ್ಞಾನದ ಬೆಳಕು ಹೊರ ಹೊಮ್ಮಲಿ ಅನ್ನುವ ಉದ್ದೇಶ ಪ್ರತಿ ತಿಂಗಳು ಶಿವಾನುಭವ ಗೋಷ್ಠಿಯನ್ನು ಆಯೋಜಿಸಲಾಗುತ್ತಿದೆ ಎಂದರು.ಕಾರ್ಯಕ್ರಮದಲ್ಲಿ ನಿವೃತ ಪ್ರಧಾನ ಗುರುಗಳಾದ ಅನಸೂಯಾ ತುಪ್ಪದ ಅವರನ್ನು ಸತ್ಕರಿಸಲ್ಲಾಯಿತುಆನಂದ ಬ್ಯಾಳಿ, ಅಪ್ಪಣ್ಣ ಮುಗಳಖೊಡ ಅವರು ಸಂಗೀತ ಸೇವೆಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕೆ.ಜಿ.ಮುಧೋಳ, ಎಸ್.ವಾಯ. ಜುಂಜರವಾಡ, ಎಸ್.ಎಂ.ಜುಂಜರವಾಡ ಸೇರಿದಂತೆ, ಗ್ರಾಮದ ಎಲ್ಲ ಸದ್ಭಕ್ತರು ಮತ್ತು ಭಜನಾ ಮಂಡಳಿಯವರು ಭಾಗವಹಿಸಿದ್ದರು, ಶಿಕ್ಷಕ ಎನ್.ಜಿ.ಹೆಬ್ಬಾಳ ನಿರೂಪಿಸಿದರು, ದೀಪಕ ಜುಂಜರವಾಡ ವಂದಿಸಿದರು